ಕರ್ನಾಟಕ ಸರ್ಕಾರ

ರಾಷ್ಟ್ರೀಯ ಸೇವಾ ಯೋಜನೆ

ಪದವಿ ಪೂರ್ವ ಶಿಕ್ಷಣ ಇಲಾಖೆ, 18 ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-560012

ಸಂಖ್ಯೆ: ಪಪೂಶಿಇ/ರಾಸೇಯೋ/ವಿ.ಶಿ./2014-15 ದಿನಾಂಕ: 01/12/2017

## ಜ್ಞಾಪನ

**ವಿಷಯ:** ದಿನಾಂಕ: 15-12-2017 ರಿಂದ 17-12-2017 ರ ವರೆಗೆ ನಡೆಯಲಿರುವ ಬೆಂಗಳೂರು ವಿಭಾಗ ಮಟ್ಟದ ಬಾಲಕರ ವಿಭಾಗ ಮಟ್ಟದ ಶಿಬಿರಕ್ಕೆ ಬಾಲಕರನ್ನು ನಿಯೋಜಿಸುವ ಬಗ್ಗೆ.

ಪದವಿಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು ಮತ್ತು **ಮೋತಿವೀರಪ್ಪ ಸರ್ಕಾರಿ ಪದವಿಪೂರ್ವ ಕಾಲೇಜು, ದಾವಣಗೆರೆ-577004.** ಇವರ ಸಂಯುಕ್ತ ಆಶ್ರಯದಲ್ಲಿ ಬೆಂಗಳೂರು ವಿಭಾಗ ಮಟ್ಟದ ಬಾಲಕರ 'ವಿಜ್ಞಾನ ಮತ್ತು ವೈಜ್ಞಾನಿಕ ಮನೋಭಾವನೆಗಾಗಿ ವಿದ್ಯಾರ್ಥಿಗಳು ಶಿಬಿರವನ್ನು "ಆರೋಗ್ಯವಂತ ಭಾರತಕ್ಕಾಗಿ ಆರೋಗ್ಯವಂತ ಯುವಕರು"ಎಂಬ ಧ್ಯೇಯದೊಂದಿಗೆ ದಿನಾಂಕ: 15-12-2017 ರಿಂದ 17-12-2017 ರ ವರೆಗೆ **ಮೋತಿವೀರಪ್ಪ ಸರ್ಕಾರಿ ಪದವಿಪೂರ್ವ ಕಾಲೇಜಿನ ಆವರಣ ಇಲ್ಲಿ** ಆಯೋಜಿಸಲಾಗಿದೆ. ಈ ಶಿಬಿರಕ್ಕೆ ತಮ್ಮ ಕಾಲೇಜಿನ ಉತ್ತಮ ಆರೋಗ್ಯವಂತ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡಿರುವ 02 ಬಾಲಕರನ್ನು ನಿಯೋಜಿಸಲು ಸೂಚಿಸಿದೆ. ನಿಯೋಜನೆಗೊಂಡ ಬಾಲಕರು ಕಾಲೇಜಿನ ಅವರಣದಲ್ಲಿ ದಿನಾಂಕ: 15-12-2017 ರ ಬೆಳಿಗ್ಗೆ 8.00 ಗಂಟೆಗೆ ಶಿಬಿರ ನಡೆಯುವ ಸ್ಥಳದಲ್ಲಿ ವರದಿ ಮಾಡಿಕೊಳ್ಳಲು ಸೂಚಿಸಿದೆ.

ಶಿಬಿರಾರ್ಥಿಗಳು ಶಿಬಿರಕ್ಕೆ ಆಗಮಿಸುವಾಗ ಈ ಕೆಳಕಂಡ ಸೂಚನೆಗಳನ್ನು ಗಮನಿಸಬೇಕು.

1. ಶಿಬಿರಕ್ಕೆ ಆಗಮಿಸುವಾಗ ಗುರುತಿನ ಪತ್ರ, ಇಂಡೆಮ್ನಿಟಿ ಬಾಂಡ್/ತಂದೆ/ತಾಯಿ/ಪೋಷಕರ ಒಪ್ಪಿಗೆ ಪತ್ರ (ಕಡ್ಡಾಯವಾಗಿ ತರಬೇಕು)
2. ಪ್ರಾಂಶುಪಾಲರು ಮತ್ತು ಕಾರ್ಯಕ್ರಮಾಧಿಕಾರಿಗಳಿಂದ ನಿಯೋಜನೆ ಪತ್ರ ತರಬೇಕು.
3. ಊಟದ ತಟ್ಟೆ, ಲೋಟ, ಲಘು ಹಾಸಿಗೆ ಮತ್ತು ಹೊದಿಕೆ, ಉಡುಪು, ಟಾರ್ಚ ಇತರೆ ವಸ್ತುಗಳನ್ನು ತರಬೇಕು.
4. ಶಿಬಿರಕ್ಕೆ ಆಗಮಿಸುವ ಶಿಬಿರಾರ್ಥಿಗಳ ಪ್ರಯಾಣ ಭತ್ಯೆ ಎನ್.ಎಸ್.ಎಸ್ ಶುಲ್ಕ ನಿಧಿಯಿಂದ ಭರಿಸುವುದು. ಉತ್ತಮ ವಸತಿ ಮತ್ತು ಊಟದ ವ್ಯವಸ್ಥೆಯನ್ನು ಸಂಘಟಕರು ಮಾಡುವರು..
5. ಶಿಬಿರದ ನಿಯಮಗಳನ್ನು ಶಿಬಿರಾರ್ಥಿಗಳು ಕಡ್ಡಾಯವಾಗಿ ಪಾಲಿಸಬೇಕು ಮತ್ತು ಬೆಲೆ ಬಾಳುವ ವಸ್ತುಗಳನ್ನು ಶಿಬಿರಕ್ಕೆ ತರಬಾರದು.

ತಮ್ಮ ವಿಶ್ವಾಸಿ

ರಾಜ್ಯ ಸಂಯೋಜನಾಧಿಕಾರಿಗಳು,
ರಾಷ್ಟ್ರೀಯ ಸೇವಾ ಯೋಜನೆ ಕೋಶ
ಮಲ್ಲೇಶ್ವರಂ, ಬೆಂಗಳೂರು.

**ಮಾಹಿತಿಗಾಗಿ ಸಂಪರ್ಕಿಸಿ:**

**ಹೆಚ್ ಚಂದ್ರಪ್ಪ** ಪ್ರಾಂಶುಪಾಲರು -9972800830

ಕೆ.ಎಸ್.ಶಿವಮಾದಯ್ಯ (ಸಹಾಯಕ ಸಂಯೋಜನಾಧಿಕಾರಿಗಳು ಬೆಂಗಳೂರು ವಿಭಾಗ) ಸಂಖ್ಯೆ: 9964070157

ಆರ್. ಲೋಕೇಶಪ್ಪ ಶಿಬಿರಾಧಿಕಾರಿಗಳು- 9481865202

**ವಿಶೇಷ ಸೂಚನೆ:**

ಶಿಬಿರ ನಡೆಯುವ ಸ್ಥಳ: ಮೋತಿವೀರಪ್ಪ ಸರ್ಕಾರಿ ಪದವಿಪೂರ್ವ ಕಾಲೇಜು, ದಾವಣಗೆರೆ-577004.

ಬಸ್ ಮಾರ್ಗ ಸಂಖ್ಯೆ: **K.S.R.T.C BUS STOP** ನಿಂದ ಬಸ್ ನಂ: 9, ವಿನಾಯಕ ಬಸ್ ನಂ: 9